# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 964
2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 11-03-2026
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಸಮುದ್ರ ಹಾಗೂ ನದಿಗಳಲ್ಲಿ ದುರಂತಗಳು ಸಂಭವಿಸಿದ ಸಂದರ್ಭದಲ್ಲಿ ರಕ್ಷಣಾ ಕಾರ್ಯಗಳಿಗೆ ಉಪಯೋಗಿಸಲು ಅಗತ್ಯವಿದ್ದು ಖರೀದಿಸಲು ಅನುಮತಿಸಲಾದ ರಕ್ಷಣಾ ಉಪಕರಣಗಳು ಯಾವುವು; ಈ ಉಪಕರಣಗಳನ್ನು ಖರೀದಿಸಲು ಅಧಿಕೃತ ಪ್ರಾಧಿಕಾರ ಯಾರು; | ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಯಾಂತ್ರೀಕೃತ ಮತ್ತು ಮೋಟಾರೀಕೃತ ದೋಣಿಗಳಿಗೆ ದ್ವಿಮುಖ ಸಂವಹನ ಸಾಧನಗಳನ್ನು / ಟ್ರಾನ್ಸ್‌ಪಾಂಡರ್ ಗಳನ್ನು (ಕೇಂದ್ರದ ಪಾಲು 60% ಮತ್ತು ರಾಜ್ಯದ ಪಾಲು 40% ಅನುದಾನ ಹಂಚಿಕೆಯಡಿ) ಅಳವಡಿಸಲಾಗುತ್ತಿದೆ. ಇದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಹವಾಮಾನ ವೈಪರೀತ್ಯದ ಮಾಹಿತಿಗಳನ್ನು ಮತ್ತು ಸಂದೇಶಗಳನ್ನು ರವಾನಿಸಬಹುದು. ಅಲ್ಲದೆ, ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಆಪತ್ತಿನ ಸಮಯದಲ್ಲಿ ದ್ವಿಮುಖ ಸಂವಹನ ಸಾಧನ ಬಳಸಿ ಮೀನುಗಾರರು ಇಲಾಖೆಯನ್ನು ಸಂಪರ್ಕಿಸಿದಾಗ ಸದರಿ ಮಾಹಿತಿಯನ್ನು ತಟರಕ್ಷಣಾದಳದವರಿಗೆ ಮತ್ತು ಕರಾವಳಿ ಕಾವಲು ಪಡೆಗಳಿಗೆ ರವಾನಿಸಲಾಗುತ್ತದೆ. ಸದರಿ ಉಪಕರಣಗಳನ್ನು ಅಳವಡಿಸಲು Indian Space Research Organization (ISRO) ಅಂಗ ಸಂಸ್ಥೆಯಾದ New Space India Limited ರವರು ಅನುಷ್ಠಾನ ಸಂಸ್ಥೆಯಾಗಿದ್ದು ಸದರಿ ಉಪಕರಣಗಳನ್ನು ಖರೀದಿಸಿ ರಾಜ್ಯಗಳಿಗೆ ವಿತರಿಸಿರುತ್ತಾರೆ.<br><br>ಸಮುದ್ರದಲ್ಲಿ ಆಪತ್ತಿನ ಸಮಯದಲ್ಲಿ ಮೀನುಗಾರರ ರಕ್ಷಣೆಗೆ ಅನುಕೂಲವಾಗಲು ಪ್ರಸ್ತುತ ರಾಜ್ಯದ ಮೀನುಗಾರಿಕೆ ಇಲಾಖೆಯಿಂದ ಸಮುದ್ರ ಆಂಬ್ಯುಲೆನ್ಸ್ ಖರೀದಿಸಲಾಗುತ್ತಿದ್ದು ಸಮುದ್ರ ಅಂಬ್ಯುಲೆನ್ಸ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. |
| ಆ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇದುವರೆಗೆ ರಕ್ಷಣಾ ಉಪಕರಣಗಳ ಖರೀದಿಗೆ ಬಳಸಲಾದ ಒಟ್ಟು ಅನುದಾನ ಎಷ್ಟು; ಯಾವ ಯಾವ ಉಪಕರಣಗಳನ್ನು ಖರೀದಿಸಲಾಗಿದೆ; ಈ ಖರೀದಿಯನ್ನು ಯಾವ ಪ್ರಾಧಿಕಾರ ಮಾಡಿದೆ; ಖರೀದಿಸಿದ ಉಪಕರಣಗಳ ಸಂಖ್ಯೆ ಮತ್ತು ಗುಣಮಟ್ಟ ಸಮರ್ಪಕವಾಗಿರುವುದನ್ನು ಪರಿಶೀಲಿಸಿದೆಯೇ; | ಫೆಬ್ರವರಿ-2026ರ ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2068 ಮತ್ತು ಉಡುಪಿ ಜಿಲ್ಲೆಯಲ್ಲಿ 3130 ದೋಣಿಗಳಿಗೆ ರಕ್ಷಣಾ ಉಪಕರಣಗಳನ್ನು ವಿತರಿಸಿ ಅಳವಡಿಸಲಾಗಿದೆ. ಇದಕ್ಕಾಗಿ ಒಟ್ಟು ವೆಚ್ಚ ರೂ.18.92 ಕೋಟಿಗಳಾಗಿದ್ದು, ಸದರಿ ಮೊತ್ತದ ಶೇ.60ರಷ್ಟು ಕೇಂದ್ರ ಸರ್ಕಾರ ಹಾಗೂ ಶೇ.40ರಷ್ಟು ರಾಜ್ಯ ಸರ್ಕಾರ ಭರಿಸುತ್ತದೆ.<br><br>ಸದರಿ ಮೊತ್ತದಲ್ಲಿ ಕೇಂದ್ರ ಪುರಸ್ಕೃತ ಮತ್ಸ್ಯಸಂಪದ ಯೋಜನೆಯಡಿ ದ್ವಿಮುಖ ಸಂವಹನ ಸಾಧನಗಳನ್ನು ಖರೀದಿಸಲಾಗಿದೆ.<br><br>ಕೇಂದ್ರ ಸರ್ಕಾರದ ಸಂಯೋಜನೆಯೊಂದಿಗೆ ಮೀನುಗಾರಿಕೆ ಇಲಾಖೆಯು ಸದರಿ ಸಾಧನಗಳನ್ನು New Space India Limited (NSIL) ರವರಿಂದ ಖರೀದಿಸಲಾಗಿದೆ.<br><br>New Space India Limited (NSIL) ರವರು Indian Space Research Organization (ISRO) ಅಂಗ ಸಂಸ್ಥೆಯಾಗಿರುವುದರಿಂದ, ಆ ಸಂಸ್ಥೆಯಿಂದ ಸದರಿ ಸಾಧನಗಳ ಗುಣಮಟ್ಟ ಮತ್ತು ಸಮರ್ಪಕತೆಯ ಬಗ್ಗೆ ಪರಿಶೀಲನೆಗೆ ಒಳಪಟ್ಟು ರಾಜ್ಯಗಳಿಗೆ ವಿತರಣೆಯಾಗಿರುತ್ತದೆ. |

| | | |
|---|---|---|
| ಇ) | ದುರಂತಗಳು ಸಂಭವಿಸಿದ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯಕ್ಕಾಗಿ ಖಾಸಗಿ ಮುಳುಗು ತಜ್ಞರನ್ನು ಬಳಸಿಕೊಳ್ಳಲಾಗುತ್ತಿದೆಯೇ; ಬಳಸುತ್ತಿದ್ದರೆ ಮುಂಜಾಗ್ರತಾ ಕ್ರಮವಾಗಿ ಅವರಿಗೆ ಯಾವ ತರಬೇತಿ ಮತ್ತು ಯಾವ ರೀತಿಯ ರಕ್ಷಣಾ ಉಪಕರಣಗಳನ್ನು ನೀಡಲಾಗುತ್ತಿದೆ; ಅನೇಕ ಕಡೆ ನಿಗದಿತ ರಕ್ಷಣಾ ಉಪಕರಣಗಳ ಕೊರತೆಯಿಂದ ಕಾರ್ಯಾಚರಣೆಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಹೌದು.<br><br>ದುರಂತಗಳು ಸಂಭವಿಸಿದ ಸಂದರ್ಭದಲ್ಲಿ ರಕ್ಷಣಾ ಕಾರ್ಯಕ್ಕಾಗಿ ಖಾಸಗಿ ಮುಳುಗು ತಜ್ಞರು ಸ್ವಯಂಪ್ರೇರಿತರಾಗಿ ಮುಂದಾಗುತ್ತಾರೆ.<br><br>ಇಲಾಖೆ ವತಿಯಿಂದ ಮುಳುಗು ತಜ್ಞರಿಗೆ ತರಬೇತಿಯನ್ನು ನೀಡಲಾಗುತ್ತಿಲ್ಲ. ಅವರಿಗೆ ಮೀನುಗಾರಿಕೆ ದೋಣಿ, ಲೈಫ್‌ಜಾಕೆಟ್, ಲೈಫ್‌ಬಾಯ್‌ಗಳನ್ನು ಅಗತ್ಯತೆ ಮತ್ತು ಅವಶ್ಯಕತೆಗಳಿಗನುಗುಣವಾಗಿ ಇಲಾಖಾ ವತಿಯಿಂದ ನೀಡಲಾಗುತ್ತಿದೆ.<br><br>ರಕ್ಷಣಾ ಉಪಕರಣಗಳ ಕೊರತೆಯಿಂದ ಕಾರ್ಯಾಚರಣೆಗೆ ತೊಂದರೆ ಉಂಟಾಗಿರುವುದಿಲ್ಲ. |
| ಈ) | ಸರ್ಕಾರದಿಂದ ಅಧಿಕೃತಗೊಂಡ ಖಾಸಗಿ ಮುಳುಗು ತಜ್ಞರಿಗೆ ಕಾರ್ಯಚರಣೆಗೆ ಅನುಕೂಲವಾಗುವಂತೆ ಅತ್ಯಾಧುನಿಕ ಕನ್ನಡಕಗಳು ಹಾಗೂ ನೀರಿನಾಳದಿಂದ ಮೇಲಿರುವವರಿಗೆ ಸಂದೇಶ ರವಾನಿಸಲು ಸಹಾಯಕ ಸಾಧನಗಳನ್ನು ಖರೀದಿಸಿ ಒದಗಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇವುಗಳನ್ನು ಯಾವ ಕಾಲಮಿತಿಯೊಳಗೆ ಒದಗಿಸಲಾಗುವುದು? | ಈ ಕುರಿತ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಪಸಂಮೀ ಇ-57 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು